

# ಕೊರೊನಾ ವೈರಸ್:

## ವೈಜ್ಞಾನಿಕ ಹಿನ್ನೆಲೆ ಮತ್ತು ಸಾಮಾಜಿಕ ಜವಾಬ್ದಾರಿ

ಸ್ವಾಮಿ ಮುಕ್ತಿದಾನಂದ

ಇತ್ತೀಚೆಗೆ ಇಡೀ ಜಗತ್ತನ್ನು ನಡುಗಿಸಿದ ಭೀಕರ ಕೊರೊನಾ ವೈರಸ್ ಪ್ರಪಂಚದ ಒಟ್ಟು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಹಲವು ದಿಕ್ಕುಗಳಲ್ಲಿ ಕಾಣಿಸಿಕೊಂಡಿರುವ ಜೀವನದ ಹೊಸ ಸವಾಲುಗಳು ಮತ್ತು ಅವುಗಳನ್ನು ಎದುರಿಸುವ ಬಗೆ ಹೇಗೆ ಎಂದು ಚಿಂತಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು; 'ವಿವೇಕಪ್ರಭ'ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.

### ೧. ವೈರಾಣು ಎಂದರೇನು?

ಮೊದಲು ನಾವು ಒಂದು ಮಾದರಿ ಜೀವಕೋಶದ ಸರಳ ರಚನೆಯನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕು. ಆಗ ಸಾಮಾನ್ಯ ಜನರೂ ಕೂಡ ಕೊರೊನಾ ವೈರಸ್‌ನ ರಚನೆಯು ಹೇಗೆ ಒಂದು ಮಾದರಿ ಜೀವಕೋಶಕ್ಕಿಂತ ಭಿನ್ನವಾಗಿದೆ ಎಂದು ಅರ್ಥೈಸಿಕೊಳ್ಳ ಬಹುದು. ಕೊರೊನಾ ವೈರಸ್‌ನ ಬಗ್ಗೆ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಇರುವ ಅರಿವು ಮತ್ತು ಜ್ಞಾನ ಅದರಿಂದ ಉಂಟಾಗುವ ಸರ್ವವ್ಯಾಪಿ ವ್ಯಾಧಿ (pandemic disease) ಯನ್ನು ನಿಯಂತ್ರಿಸಲು ತೆಗೆದುಕೊಳ್ಳಬಹುದಾದ ಪ್ರತಿಬಂಧನಾ ಕ್ರಮಗಳನ್ನು ಮತ್ತು ಪರಿಹಾರಗಳನ್ನು ಅನುಷ್ಠಾನಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ.

ಆಂಗ್ಲ ಜೀವವಿಜ್ಞಾನಿ ಮತ್ತು ಮಾನವಶಾಸ್ತ್ರಜ್ಞ ವಿಲಿಯಂ ಹಕ್ಸ್‌ಲೇ ಹೀಗೆ ಹೇಳುತ್ತಾನೆ, ಜೀವದ್ರವ(protoplasm)ವು ಜೀವಿಯ ಭೌತಿಕ ಆಧಾರ. ಇದು ಜೀವಕೋಶವಿಜ್ಞಾನದ ಹಾಗೂ ಜೀವವಿಜ್ಞಾನದ ಮೂಲ ಪರಿಕಲ್ಪನೆ. ಕೋಶಪೊರೆ(cell membrane)ಯಿಂದ ಆವರಿಸಲ್ಪಟ್ಟ ದ್ರವವನ್ನು ಜೀವದ್ರವ ಎಂದು ಕರೆಯುತ್ತಾರೆ. ಕೋಶಪೊರೆಯಿಂದ ಒಳಗಾಗಿರುವ ಹಾಗೂ ಮಧ್ಯದಲ್ಲಿರುವ ಕೋಶಕೇಂದ್ರದಿಂದ ಹೊರಗಿರುವ ಮಾತೃಕೆ (matrix) ಯನ್ನು ಕೋಶದ್ರವ (cytoplasm) ಎಂದು ಕರೆಯುತ್ತಾರೆ. ಆದ್ದರಿಂದ ಕಣದಂಗ (cell organell) ಗಳಿರುವ ಕೋಶದ್ರವ ಹಾಗೂ ಆನುವಂಶಿಕ ವಸ್ತು (ಡಿ.ಎನ್.ಎ) ವನ್ನು ಹೊಂದಿರುವ ಕೋಶಕೇಂದ್ರ ಜೀವದ್ರವದ ಘಟಕ ಗಳಾಗಿವೆ.

### ೨. ವೈರಾಣು ಸಜೀವಿಗಳ ಹಾಗೂ ನಿರ್ಜೀವ ವಸ್ತುಗಳ ನಡುವಿನ ಸೇತುವೆಯಂತೆ

ವೈರಾಣುವು ಜೀವಿಗಳ ಹಾಗೂ ನಿರ್ಜೀವಗಳೆರಡರ ಗುಣ ಲಕ್ಷಣಗಳನ್ನೂ ಹೊಂದಿರುವ ಒಂದು ಆದಿಮ ಪರಾವಲಂಬಿ. ಇದು ಜೀವಿಯ ಹೊರಗಿರುವಾಗ ಒಂದು ನಿಗೂಢವಾದ ಆಗೋಚರ, ನಿರ್ಜೀವ, ಸೂಕ್ಷ್ಮ ಸ್ಫಟಿಕದಂತಹ ಅಥವಾ ಧೂಳಿನ ಕಣವಾಗಿದೆ. ಆಶ್ಚರ್ಯವೆಂದರೆ, ಅದು ಆತಿಥೇಯ ಜೀವಿಗಳನ್ನು ಪ್ರವೇಶಿಸಿದ ಕೂಡಲೇ ಜೀವವನ್ನು ಪಡೆಯುತ್ತವೆ (ಅಮೀಬಾದಿಂದ ಹಿಡಿದು ಪ್ರಾಣಿಗಳು ಮತ್ತು ಸಸ್ಯಗಳವರೆಗೆ). ಆದ್ದರಿಂದ ಇದೊಂದು ಅವಿಕಲ್ಪ ಪರಾವಲಂಬಿ (obligatory parasite) ಎಂದು ಹೇಳಬಹುದು. ಅದು ಜೀವದ್ರವವನ್ನಾಗಲಿ ಕಣದಂಗಗಳನ್ನಾಗಲಿ ಹೊಂದಿಲ್ಲ. ಅದು ಪ್ರೋಟೀನ್ ಕವಚ ದಿಂದ ಆವೃತವಾದ ಡಿ.ಎನ್.ಎ ಅಥವಾ ಆರ್.ಎನ್.ಎ. ಆನು ವಂಶಿಕ ವಸ್ತುವನ್ನು ಮಾತ್ರ ಹೊಂದಿದೆ. ಆದ್ದರಿಂದ ಜೀವಶಾಸ್ತ್ರ ಮತ್ತು ಜೀವಿಗಳ ಉಗಮದ ಸಿದ್ಧಾಂತಗಳನ್ನು ಅಧ್ಯಯನ ಮಾಡಿ ದವರು ಅದನ್ನು ಸಜೀವಿಗಳ ಹಾಗೂ ನಿರ್ಜೀವ ವಸ್ತುಗಳ ನಡುವಿನ ಸೇತುವೆ ಎಂದು ಪರಿಗಣಿಸುತ್ತಾರೆ.

## ೩. ಕೊರೊನಾವೈರಸ್‌ನ ಸ್ವರೂಪ

ಇದು ಕೊರೊನಾ ವೈರಿಡೇ ಕುಟುಂಬಕ್ಕೆ ಸೇರಿದ ಒಂದು ವೈರಾಣು. ಕುದುರೆಲಾಳ ಬಾವಲಿ (horse-shoe bat) ಎಂಬ ಮಾನವೇತರ ಆತಿಥೇಯವು ಈ ವೈರಾಣುವಿನ ಮೂಲ ಸಂಗ್ರಾಹಕ. ಅದರಿಂದ ಇದು ಮನುಷ್ಯರಿಗೂ ಹಬ್ಬಿತು ಎಂಬುದು ತಜ್ಞರ ಅಭಿಪ್ರಾಯ. ಬಾವಲಿಯ ಪ್ರತಿರೋಧನಾ ವ್ಯವಸ್ಥೆ (immune system)ಯು ಮಾನವನದಕ್ಕಿಂತ ಭಿನ್ನವಾಗಿದ್ದು ಅವುಗಳು ವೇಗವಾಗಿ ದ್ವಿಗುಣಿತಗೊಳ್ಳಲು ಅನುವು ಮಾಡಿಕೊಡುತ್ತವೆ. ಹಾಗೆಯೇ ಈ ವೈರಾಣುವಿನಿಂದ ಯಾವುದೇ ಹಾನಿಕಾರಕ ಪರಿಣಾಮಗಳು ಆಗದಂತೆ ರಕ್ಷಿಸುತ್ತದೆ. ಇತ್ತೀಚಿನ ಇತರ ವೈರಾಣು ರೋಗಸ್ಫೋಟಗಳಾದ SARS (Severe Acute Respiratory Syndrome), MERS (Middle East Respiratory Syndrome) ಮತ್ತು ಎಬೋಲಗಳಿಗೂ ಕೂಡ ಈ ಬಾವಲಿಗಳೇ ಮೂಲವಾಗಿವೆ. ಕೊರೊನಾವೈರಸ್ ಮೊದಲಿಗೆ ಚೀನಾ ದೇಶದ ವೂಹಾನ್ ಪ್ರದೇಶದಲ್ಲಿ ಡಿಸೆಂಬರ್ ೨೦೧೯ರಲ್ಲಿ ಕಾಣಿಸಿಕೊಂಡಿತು. ಅತಿಕಡಿಮೆ ಅವಧಿಯಲ್ಲಿಯೇ ಅದು ವಿಶ್ವದಾದ್ಯಂತ ವ್ಯಾಪಿಸಿತು. ಈ ಸಾಂಕ್ರಾಮಿಕ ರೋಗ (epidemic disease) ವನ್ನು ಈಗ ಕೋವಿಡ್–೧೯ ಎಂದೂ ಅದಕ್ಕೆ ಕಾರಣವಾಗಿರುವ ವೈರಾಣುವನ್ನು SARS-CoV-2 ಎಂದೂ ಹೆಸರಿಸಲಾಗಿದೆ. ಈ SARS ವೈರಾಣುವಿನ ಉತ್ಪರಿವರ್ತಿತ (ರೂಪಾಂತರಿತ) ವಿಧ. ನಿರ್ಜೀವ ವ್ಯಕ್ತಿಯು ಸೀನಿದಾಗ ಅಥವಾ ಕೆಮ್ಮಿದಾಗ ಉಸಿರಾಟದ ಹನಿಗಳ ಮೂಲಕ ಜನರ ನಡುವೆ ಹರಡುತ್ತದೆ.

## ೪. ಕೊರೊನಾವೈರಸ್‌ನ ರಚನೆ

ಈ ಕೊರೊನಾವೈರಸ್ ಪ್ರೋಟೀನ್ ಕವಚವನ್ನು ಹೊಂದಿರುವ ಗೋಳಾಕಾರದ ಏಕ ಎಳೆಯ ಆರ್.ಎನ್.ಎ. (ಆನುವಂಶಿಕ ವಸ್ತು) ವೈರಾಣು. ಇದು ತನ್ನ ಮೇಲ್ಮೈ ಶಲಾಕೆ ಪ್ರೋಟೀನ್ (spike protein) ಗಳೆಂಬ ಸೂರ್ಯನ ಪ್ರಭಾವಳಿಯಲ್ಲಿರುವಂತಹ ಹೊರಚಾಚುಗಳನ್ನು ಹೊಂದಿದೆ. ಆದ್ದರಿಂದಲೇ ಇದನ್ನು ಕೊರೊನಾವೈರಸ್ ಎಂಬ ಹೆಸರಿನಿಂದ ಕರೆಯುವುದು. ಶಲಾಕೆ ಪ್ರೋಟೀನ್‌ಗಳು ಆತಿಥೇಯ ಜೀವಕೋಶದ ಮೇಲಿರುವ ಗ್ರಾಹಕ ಗಳಿಗೆ ಬಂಧಗೊಳ್ಳುತ್ತವೆ. ಇದರ ಶಲಾಕೆ ಪ್ರೋಟೀನ್‌ಗಳು ಇತರ ಕೊರೊನಾವೈರಸ್‌ಗಳಗಿಂತ ಭಿನ್ನವಾಗಿರುವುದರಿಂದ ಇದನ್ನು ನವೀನ ಕೊರೊನಾವೈರಸ್ (nCoV-novel coronavirus) ಎಂದು ಕರೆಯುತ್ತಾರೆ.

## ೫. ಜೀವಿಗಳನ್ನು ಪ್ರವೇಶಿಸಿದ ಮೇಲೆ ಇದು ವೇಗವಾಗಿ ಸ್ವಪ್ರತೀಕರಣಗೊಳ್ಳುತ್ತದೆ

ಸಾಧಾರಣವಾಗಿ ಜೀವಿಯನ್ನು ಪ್ರವೇಶಿಸಿದ ಮೇಲೆ ಈ ಕೊರೊನಾವೈರಸ್ ಅತ್ಯಂತ ವೇಗವಾಗಿ ದ್ವಿಗುಣಿತಗೊಳ್ಳುತ್ತದೆ. ಆತಿಥೇಯವನ್ನು ಸೇರಿದ ಮೇಲೆ ಅದರ ಆರ್.ಎನ್.ಎ. ಸ್ವಪ್ರತೀಕರಣಗೊಂಡು ತನ್ನದೇ ಅನೇಕ ಪ್ರತಿಕೃತಿಗಳನ್ನು ಉತ್ಪಾದಿಸುತ್ತದೆ. ಆರ್.ಎನ್.ಎ. ಕಣಗಳು ಪ್ರೋಟೀನ್ ಕವಚದಿಂದ ಆವೃತಗೊಂಡು ಆತಿಥೇಯ ಜೀವಕೋಶಗಳಿಂದ ಹೊರಬರುತ್ತವೆ ಮತ್ತು ಪುನಃ ಹೊಸ ಜೀವಕೋಶಗಳ ಮೇಲೆ ದಾಳಿ ಮಾಡುತ್ತವೆ. ಸೋಂಕು ಉಂಟುಮಾಡುವ ಸಂದರ್ಭದಲ್ಲಿ ಅವು ಉಸಿರಾಟದ ಹನಿಗಳ ಮೂಲಕ ಬಾಯಿ ಅಥವಾ ಮೂಗನ್ನು ಪ್ರವೇಶಿಸುತ್ತವೆ. ಕ್ರಮೇಣವಾಗಿ ಅವು ಶ್ವಾಸನಾಳ ಮತ್ತು ಶ್ವಾಸಕೋಶಗಳನ್ನು ಸೇರುತ್ತವೆ. ನಂತರ ಅವು ಶ್ವಾಸಕೋಶಗಳ ವಾಯುಕೋಶ (alveolu)ಗಳಲ್ಲಿ ದ್ವಿಗುಣಿತಗೊಳ್ಳುತ್ತವೆ. ಇದು ವಾಯುಕೋಶಗಳ ವಿಕಸನ ಮತ್ತು ಸಂಕೋಚನಗಳನ್ನು ಕಡಿಮೆ ಮಾಡಿ ಶ್ವಾಸಕೋಶದ ತಂತೂತಕವೃದ್ಧಿ (fibrosis)ಗೆ ಕಾರಣವಾಗುತ್ತದೆ. ಇದರ ಪರಿಣಾಮವಾಗಿ ಆಮ್ಲಜನಕವನ್ನು ಪೂರೈಸುವ ನಮ್ಮ ಅಂಗವಾದ ಶ್ವಾಸಕೋಶವು ತೀವ್ರವಾಗಿ ಹಾನಿಗೊಂಡು ಉಸಿರಾಟಕ್ಕೆ ತೊಂದರೆಯಾಗುತ್ತದೆ. ಮೆದುಳಿಗೆ ಮತ್ತು ಸಂಪೂರ್ಣ ದೇಹಕ್ಕೆ ಆಮ್ಲಜನಕದ ಪೂರೈಕೆಯ ಕೊರತೆಯುಂಟಾಗಿ ಕೆಲವೇ ದಿನಗಳಲ್ಲಿ ರೋಗಿಯು ಸಾಯುತ್ತಾನೆ.

## ೬. ಕೊರೊನಾವೈರಸ್ ಏಕೆ ಮಾರಕ ಮತ್ತು ವೇಗವಾಗಿ ಹರಡುತ್ತಿದೆ?

ಆತಿಥೇಯದ ಹೊರಗೆ ನಿರ್ಜೀವ ರೂಪದಲ್ಲಿ ಮತ್ತು ಆತಿಥೇಯದ ಒಳಗೆ ಜೀವಂತ ರೂಪದಲ್ಲಿರುವ ಈ ವೈರಾಣುವಿನ ಪ್ರೋಟೀನ್ ಕವಚವನ್ನು ಹೇಗೆ ವಿಘಟಿಸಬಹುದು ಮತ್ತು ಅದರ ಆರ್.ಎನ್.ಎ. ಅನ್ನು ಹೇಗೆ ನಿಷ್ಕ್ರಿಯಗೊಳಿಸಬಹುದು ಎಂಬುದು ಒಂದು ಸಂಶೋಧನಾ ವಿಷಯವಾಗಿದೆ. ಅಷ್ಟಾಗಿಯೂ ಆತಿಥೇಯದ ಹೊರಗೆ ಅದರ ಕ್ರಿಯಾಶೀಲ ಅವಧಿಯು ೩ ರಿಂದ ೪ ದಿನಗಳಿಗೆ ಸೀಮಿತವಾಗಿದೆ. ವಿಶೇಷವಾಗಿ ಭಾರತದಂತಹ ತುಲನಾತ್ಮಕವಾಗಿ ಆರ್ದ್ರತೆಯು ಹೆಚ್ಚಾಗಿರುವ ಉಷ್ಣವಲಯದ ಸುಡು ವಾತಾವರಣದಲ್ಲಿ. ನಮ್ಮ ಸ್ವಾಭಾವಿಕ ರೋಗನಿರೋಧತೆ (innate immunity) ಯ ಒಂದು ಘಟಕವಾದ ಹಾಗೂ ರೋಗಾಣುಗಳನ್ನು ಪ್ರತಿರೋಧಿಸುವ ರಕ್ಷಣಾವ್ಯವಸ್ಥೆಯ ಪ್ರಥಮ ಪಂಕ್ತಿಯಾದ ನೈಸರ್ಗಿಕ ಹಂತಕ ಜೀವಕೋಶ (Natural Killer Cell – NK Cell) ಗಳೆಂಬ ಒಂದು ಬಗೆಯ ಬಿಳಿ ರಕ್ತಕಣಗಳು ಈ ವೈರಾಣುಗಳ ವಿರುದ್ಧ ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ. ರೋಗಲಕ್ಷಣಗಳು ಪ್ರಕಟಣೆಯಾಗುವುದಕ್ಕಿಂತ ಮೊದಲು ಜನರು ೧ ರಿಂದ ೧೪ ದಿನಗಳವರೆಗೆ ವಾಹಕರಾಗಿರಬಹುದು. ಜ್ವರ, ಒಣಕೆಮ್ಮು, ಆಯಾಸ ಮತ್ತು ಅತಿಯಾದ ಜೊಂಪು ಈ ಕಾಯಿಲೆಯ ಅತಿ ಸಾಮಾನ್ಯ ಲಕ್ಷಣಗಳು. ತೀವ್ರವಾದ ಪ್ರಕರಣಗಳಲ್ಲಿ ಉಸಿರಾಟವು ಕಷ್ಟಕರವಾಗಿರುತ್ತದೆ. ಇದನ್ನು ನಿಗ್ರಹಿಸಲು ಸಾಧ್ಯವಾಗದಿದ್ದಾಗ, ವಿಶೇಷವಾಗಿ ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಹೃದಯ, ಶ್ವಾಸಕೋಶ,

ಮೂತ್ರಪಿಂಡ, ಪಿತ್ತಜನಕಾಂಗಗಳ ಸಮಸ್ಯೆಯಿಂದ ಬಳಲುತ್ತಿರುವ ಸಹ-ರೋಗಗ್ರಸ್ತ (co-morbid) ಆರೋಗ್ಯ ಸ್ಥಿತಿಯುಳ್ಳ ವ್ಯಕ್ತಿಗಳಲ್ಲಿ ಹಾಗೂ ೧೨ ತಿಂಗಳ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಶಿಶುಗಳಲ್ಲಿ ಇದು ಮಾರಕವಾಗಬಹುದು. ಕೊರೊನಾವೈರಸ್‌ಗಳು ಉಸಿರಾಟದ ಹನಿಗಳಿಂದ ಹರಡುವುದರಿಂದ ಹಾಗೂ ಕೈಯ ಮೇಲೆ ಬಹಳ ಸಮಯ ಕ್ರಿಯಾಶೀಲ ಸ್ಥಿತಿಯಲ್ಲಿ ಉಳಿದುಕೊಳ್ಳುವ ಸಾಧ್ಯತೆಯಿರುವುದರಿಂದ ಮೂಗು ಮತ್ತು ಬಾಯಿಯನ್ನು ಮುಟ್ಟಬಾರದು. ಹಾಗೆಯೇ ಆಗಿಂದಾಗ್ಗೆ ಸಾಬೂನಿನಿಂದ ಕೈಯನ್ನು ಸುಮಾರು ೨೦ ರಿಂದ ೩೦ ಸೆಕಂಡುಗಳ ಕಾಲ ತೊಳೆಯುತ್ತಿರಬೇಕು. ಕೈಯನ್ನು ಶುಚಿಯಾಗಿಟ್ಟುಕೊಳ್ಳಲು ಸ್ಯಾನಿಟೈಸರ್‌ಗಳನ್ನು ಕೂಡ ಉಪಯೋಗಿಸಬಹುದು.

## ೭. ಕೋವಿಡ್-೧೯ರ ತಡೆಗಟ್ಟುವಿಕೆ  ವೈಜ್ಞಾನಿಕ ಹಾಗೂ ಸಾಮಾಜಿಕ ವಿಧಾನ

ಈ ನವೀನ ಉತ್ಪರಿವರ್ತಿತ (ರೂಪಾಂತರಿತ) ಕೊರೊನಾ ವೈರಸ್‌ಅನ್ನು ತಡೆಗಟ್ಟಲು ನಮ್ಮ ದೇಹದ ಪ್ರತಿರೋಧನ ವ್ಯವಸ್ಥೆಯು ಇನ್ನೂ ನೂತನ ತಂತ್ರವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಷ್ಟೆ. ಪ್ರಸ್ತುತ ನಮ್ಮ ಬಿಳಿ ರಕ್ತಕಣಗಳು ಬ್ಯಾಕ್ಟೀರಿಯಾ ಮತ್ತು ಇತರ ಆಕ್ರಮಣಕಾರಿ ರೋಗಾಣುಗಳನ್ನು ಕೊಲ್ಲಬಲ್ಲವು. ಆದರೆ SARS CoV -2 ಅನ್ನು ನಾಶಪಡಿಸುವಂತಹ ರೋಗಪ್ರತಿರೋಧನಾ ವ್ಯವಸ್ಥೆಯನ್ನು ನಾವಿನ್ನೂ ಬೆಳೆಸಿಕೊಂಡಿಲ್ಲ. ಆದ್ದರಿಂದ ಈ ಕೊರೊನಾವೈರಸ್‌ಅನ್ನು ದೇಹದ ಹೊರಗಾಗಲಿ ಅಥವಾ ಒಳಗಾಗಲಿ ಪರಿಣಾಮಕಾರಿಯಾಗಿ ಎದುರಿಸಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಕೊರೊನಾವೈರಸ್ ದೇಹವನ್ನು ಪ್ರವೇಶಿಸಿದಾಗ ನಮ್ಮ ದೇಹದ ರಕ್ಷಣಾ ವ್ಯವಸ್ಥೆಯು ಅದರ ಆರ್.ಎನ್.ಎ.ಅನ್ನು ನಿಷ್ಕ್ರಿಯಗೊಳಿಸುವಂತೆ ಮಾಡುವುದು ಅಥವಾ ಪ್ರತಿಜೈವಿಕ (antibiotic)ಗಳನ್ನು ಬಳಸಿ ನಿಷ್ಕ್ರಿಯಗೊಳಿಸುವುದು ಅಥವಾ ಒಂದು ಲಸಿಕೆಯನ್ನು ಅಭಿವೃದ್ಧಿ ಪಡಿಸುವುದು, ಇವುಗಳು ಈಗ ನಮ್ಮ ಮುಂದಿರುವ ದೊಡ್ಡ ಸವಾಲು. ಮಾನವನ ಮುಖಾಂತರ ಇದು ವೇಗವಾಗಿ ಹರಡುತ್ತಿರುವುದರಿಂದ ಸಾಂಕ್ರಾಮಿಕ ರೋಗವೊಂದು ಈಗ ಸರ್ವವ್ಯಾಪಿ ರೋಗವಾಗಿ ಪರಿವರ್ತನೆಗೊಂಡಿದೆ. ಯಾವುದೇ ವೈದ್ಯಕೀಯ ಶುಶ್ರೂಷೆಗೂ ಬಗ್ಗದೆ ಶೀಘ್ರಗತಿಯಲ್ಲಿ ಮಾನವನ ಸಾವಿಗೆ ಕಾರಣವಾಗಿದೆ. ಈ ಕಾರಣಕ್ಕಾಗಿಯೇ ಚೀನಾದ ವುಹಾನ್, ಇಟಲಿ, ಸ್ಪೇನ್, ಅಮೆರಿಕಾದಲ್ಲಿ ಸಾವಿರಾರು ಜನರು ಅತಿಕಡಿಮೆ ಅವಧಿಯಲ್ಲಿ ಸಾವನ್ನಪ್ಪಿದ್ದಾರೆ. ಅನುಕೂಲಕರ ವಿಮಾನಯಾನ ಹಾಗೂ ವಿಹಾರ ನೌಕಾಯಾನಗಳಿಂದಾಗಿ ಗಾಢವಾದ ಪರಸ್ಪರ ಸಂಪರ್ಕವನ್ನು ಹೊಂದಿರುವ ಈ ಪ್ರಪಂಚದಲ್ಲಿ ಇದು ಸುಮಾರು ೨೦೦ ರಾಷ್ಟ್ರಗಳಿಗೆ ಹರಡಿದೆ. ೨೦೨೦ರ ಏಪ್ರಿಲ್ ೧೧ರ ದಿನದಂತ್ಯಕ್ಕೆ ೧೨,೦೧,೯೩೪ ಸೋಂಕಿತರು ಗುರುತಿಸಲ್ಪಟ್ಟಿದ್ದಾರೆ ಹಾಗೂ ೧,೦೧,೪೮೫ ಜನರು ಮೃತಪಟ್ಟಿದ್ದಾರೆ.



ವೇಗವಾಗಿ ಹರಡುತ್ತಿರುವ ಈ ಸಾಂಕ್ರಾಮಿಕ ರೋಗದ ಬೃಹತ್ವತೆಯನ್ನು ಅರಿತ ಭಾರತ ಸರ್ಕಾರವು ಇದನ್ನು ತಡೆಗಟ್ಟುವ ಏಕೈಕ ಮಾರ್ಗವೆಂದರೆ ಜನರನ್ನು ಹೆಚ್ಚು ಬೆರೆಯಲು ಬಿಡದೆ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದರಿಂದ ಮಾತ್ರ ಎಂಬ ತೀರ್ಮಾನಕ್ಕೆ ಬಂದಿದೆ. ಕೊರೊನಾವೈರಸ್ ಪೀಡಿತ ಜನರನ್ನು ಪ್ರತ್ಯೇಕವಾಗಿಸಿ, ಜನರ ಸಂಪರ್ಕಕ್ಕೆ ಬಾರದಂತೆ ನೋಡಿಕೊಳ್ಳಬೇಕು. ಹೀಗೆ **ವೈರಾಣುವು ಮಾನವ ಆತಿಥೇಯವನ್ನು ಪ್ರವೇಶಿಸದಂತೆ ನೋಡಿಕೊಂಡು ಗಣನೀಯ ಅವಧಿಯವರೆಗೆ ಅದು ಸೂಕ್ತ ಆತಿಥೇಯದ ಕೊರತೆಯಿಂದಾಗಿ ನಾಶವಾಗುವಂತೆ ಮಾಡಿ ವೈರಾಣು ಸರಪಣಿಯನ್ನು ತುಂಡರಿಸಬಹುದು.**

## ೮. ಸಾಮಾಜಿಕ ಅಂತರ ಹಾಗೂ ಮನೆಯಲ್ಲಿಯೇ ಉಳಿದುಕೊಳ್ಳಿ : ಏಕೈಕ ಮಂತ್ರ

ಈ ಉದ್ದೇಶದಿಂದಲೇ ಮೊಬೈಲ್ ರಿಂಗ್‌ಟೋನ್‌ನಲ್ಲಿ ಕೊರೊನಾವೈರಸ್ ಸೋಂಕನ್ನು ತಡೆಗಟ್ಟುವ ಮಾರ್ಗದ ಸಂದೇಶವನ್ನು ಕೇಳುತ್ತೇವೆ. ಅಂತಹ ಸಂದೇಶಗಳನ್ನು ನಾವು ಎಲ್ಲಾ ಮಾಧ್ಯಮಗಳಲ್ಲಿಯೂ ಮತ್ತು ಸಾಧ್ಯವಿರುವ ಎಲ್ಲಾ ರೀತಿಯಲ್ಲೂ ಪ್ರಸಾರ ಮಾಡಬೇಕು. ಕೇಂದ್ರ ಸರ್ಕಾರ ಹಾಗೂ ಎಲ್ಲಾ ರಾಜ್ಯ ಸರ್ಕಾರಗಳೂ ಈ ಕಾರಣಕ್ಕಾಗಿಯೇ ಸಾಮಾಜಿಕ ಬಂಧ (lockdown)ವನ್ನು ಘೋಷಿಸಿದೆ. ಹಾಗಾಗಿ ಕೋವಿಡ್ -೧೯ ಅನ್ನು ತಡೆಗಟ್ಟಲು ಇರುವ ಮಂತ್ರಗಳೆಂದರೆ — ಮನೆಯಲ್ಲಿಯೇ ಉಳಿದುಕೊಳ್ಳಿ ಮತ್ತು ಎಲ್ಲೆಡೆ ಸಾಮಾಜಿಕ



ಅಂತರವನ್ನು ಕಾಪಾಡಿಕೊಳ್ಳಿ. ಅತ್ಯಗತ್ಯ ವಸ್ತುಗಳನ್ನು ಖರೀದಿಸುವ ಸಮಯ ದಲ್ಲೂ ಸಹ ಇತರ ವ್ಯಕ್ತಿಗಳಿಂದ ಒಂದು ಅಥವಾ ಎರಡು ಮೀಟರ್ ಅಂತರವನ್ನು ಕಾಯ್ದುಕೊಳ್ಳಬೇಕು. '**ಗುಣಪಡಿಸುವುದಕ್ಕಿಂತ ತಡೆಗಟ್ಟುವುದು ಉತ್ತಮ**' ಎಂಬ ಅಮೂಲ್ಯ ನುಡಿಗಟ್ಟನ್ನು ನಾವು ಕೇಳಿದ್ದೇವೆ. ಈ ಕ್ಷಣದ ತನಕವೂ ಕೊರೊನಾ ವೈರಸ್‌ಗೆ ಸಂಬಂಧಪಟ್ಟಂತೆ ತಡೆಗಟ್ಟುವಿಕೆಯೊಂದೇ ಏಕೈಕ ಮಾರ್ಗವಾಗಿದೆ.

### ೯. ಕಟ್ಟುನಿಟ್ಟಾದ ರಾಷ್ಟ್ರವ್ಯಾಪಿ ಲಾಕ್‌ಡೌನ್‌ನ ಅಗತ್ಯತೆ

ಅಭಿವೃದ್ಧಿ ಹೊಂದಿರುವ ದೇಶಗಳಾದ ಇಟಲಿ, ಚೀನಾ, ಸ್ಪೇನ್, ಯು.ಕೆ., ಅಮೆರಿಕಾ ಮತ್ತು ಇತರೆ ದೇಶಗಳಲ್ಲಿ ಕೊರೊನಾ ವೈರಸ್ಸಿನಿಂದ ಉಂಟಾದ ವಿನಾಶದ ವ್ಯಾಪ್ತಿಯನ್ನು ನಾವು ನೋಡಿದರೆ ವೈದ್ಯಕೀಯ ಮೂಲಸೌಕರ್ಯಗಳಲ್ಲಿ ಕಡಿಮೆ ಅಭಿವೃದ್ಧಿ ಹೊಂದಿರುವ ಹಾಗೂ ನಗರ ಮತ್ತು ಕೊಳಚೆ ಪ್ರದೇಶಗಳಲ್ಲಿ, ವಿಶೇಷವಾಗಿ ಹಳ್ಳಿಗಳಲ್ಲಿ, ಗುಂಪು ಗುಂಪಾಗಿ ವಾಸಿಸುವ ಅಭ್ಯಾಸದ ಜನರಿರುವ ಭಾರತದಲ್ಲಿ ಕೊರೊನಾವೈರಸ್‌ನಿಂದಾಗುವ ಸೋಂಕು ಮತ್ತು ಅದರ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಅತಿ



ಹೆಚ್ಚಿನ ಜಾಗರೂಕತೆ ಮತ್ತು ನಿಗಾವಹಿಸಬೇಕು. **ನಮ್ಮ ದೇಶದಲ್ಲಿ ಲಾಕ್‌ಡೌನ್‌ಅನ್ನು ಇನ್ನೂ ಸ್ವಲ್ಪ ಸಮಯದವರೆಗೆ ಅನಿವಾರ್ಯವಾಗಿ ಮುಂದುವರಿಸಬೇಕಾಗಬಹುದು. ಇದನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಇನ್ನಷ್ಟು ದೃಢವಾಗಿ ಮತ್ತು ಮನವರಿಕೆಯಾಗುವಂತೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಬೇಕು.**

### ೧೦. ಕೋವಿಡ್-೧೯ರ ಸಂಭಾವ್ಯ ಔಷಧೋಪಚಾರಕ್ಕಾಗಿ ಪರೀಕ್ಷೆಗೊಳಪಟ್ಟಿರುವ ಚಿಕಿತ್ಸಕಾ ವಿಧಾನಗಳು

ಕೊರೊನಾವೈರಸ್‌ಗೆ ಸಂಭಾವ್ಯ ಚಿಕಿತ್ಸೆಯನ್ನು ಕಂಡುಹಿಡಿಯಲು ವಿಶ್ವದಾದ್ಯಂತ ವಿಜ್ಞಾನಿಗಳು ಮತ್ತು ವೈದ್ಯರು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಇತರ ರೋಗಗಳಿಂದ ಬಳಲುತ್ತಿರುವ ರೋಗಿಗಳಿಗೆ ನೀಡಿರುವ ಹಲವಾರು ಅನುಮೋದಿತ ಮತ್ತು ಸುರಕ್ಷಿತವಾದ ವ್ಯಕ್ತಿನಿರ್ದಿಷ್ಟ ಚಿಕಿತ್ಸೆಗಳನ್ನು ಪರೀಕ್ಷಿಸಲು ವೈದ್ಯಕೀಯ ಪ್ರಕ್ರಿಯೆಗಳು ನಡೆಯುತ್ತಿವೆ. ಮಲೇರಿಯಾ ಕಾರಕಗಳಿಗೆ ವಿರುದ್ಧವಾಗಿ ವರ್ತಿಸುವ ಕ್ಲೋರೋಕ್ವಿನ್






ಮತ್ತು ಹೈಡ್ರಾಕ್ಸಿಕ್ಲೋರೋಕ್ವಿನ್ ಹಾಗೂ ಹೆಚ್.ಐ.ವಿ. ಚಿಕಿತ್ಸೆಗೆ ಉಪಯೋಗಿಸುವ ಲೋಪಿನಾವಿರ್ ಮತ್ತು ರಿಟೋನಾವಿರ್. ಎಬೋಲಾ ಚಿಕಿತ್ಸೆಗೆ ಈ ಹಿಂದೆ ಅಭಿವೃದ್ಧಿಪಡಿಸಿದ ರೆಮ್ಡೆಸಿವಿರ್ (Remdisivir) ಎಂಬ ಪ್ರಾಯೋಗಿಕ ಪ್ರತಿವೈರಾಣುಕಾರಕದ ಪರಿಣಾಮವನ್ನೂ ಪರಿಶೋಧಿಸಲಾಗುತ್ತಿದೆ. ಚೇತರಿಕಾ ಪ್ಲಾಸ್ಮಾ ಚಿಕಿತ್ಸೆ (Convalescent plasma treatment) ಎಂಬ ಇನ್ನೊಂದು ಚಿಕಿತ್ಸೆ ಕೂಡ ಗಣನೆಯಲ್ಲಿದೆ. ಈ ಚಿಕಿತ್ಸೆಯಲ್ಲಿ ಕೋವಿಡ್-೧೯ರಿಂದ ಚೇತರಿಸಿಕೊಂಡ ರೋಗಿಗಳ ರಕ್ತದಿಂದ ಪ್ಲಾಸ್ಮಾವನ್ನು ಪಡೆಯಲಾಗುತ್ತಿದೆ. SARS-CoV-2 ವಿರುದ್ಧ ಅತ್ಯಧಿಕವಾಗಿ ಉತ್ಪಾದಿಸಲ್ಪಟ್ಟ ಪ್ರತಿಜೈವಿಕಗಳಿರುವ ಈ ಪ್ಲಾಸ್ಮಾವನ್ನು ತೀವ್ರ ಅನಾರೋಗ್ಯಪೀಡಿತ ರೋಗಿಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಇದು ಸೋಂಕಿತರಲ್ಲಿ ತೀಕ್ಷ್ಣವಾದ ಪ್ರತಿರೋಧನಾ ಪ್ರತಿಕ್ರಿಯೆಯನ್ನು ಪ್ರಚೋದಿಸುತ್ತದೆ. ಶೀಘ್ರಗತಿಯಲ್ಲಿ ಲಸಿಕೆಯನ್ನು (vaccine) ಅಭಿವೃದ್ಧಿಪಡಿಸುವುದಕ್ಕಾಗಿ ಹಲವಾರು ಅಸಾಂಪ್ರದಾಯಿಕ ವಿಧಾನಗಳನ್ನೂ ಪರಿಶೋಧಿಸಲಾಗುತ್ತಿದೆ. ಅವುಗಳು ೧೦ ರಿಂದ ೧೮ ತಿಂಗಳಲ್ಲಿ ಫಲಿತಾಂಶವನ್ನು ನೀಡುವ ನಿರೀಕ್ಷೆಯಿದೆ. ಇತ್ತೀಚಿಗೆ ಅಮೆರಿಕಾದಲ್ಲಿ ವೈದ್ಯಕೀಯ ಪ್ರಯೋಗವೊಂದರಲ್ಲಿ ಪ್ರಥಮ ಬಾರಿ ರೋಗಿಯೊಬ್ಬನಿಗೆ ಕೊರೊನಾವೈರಸ್‌ನ ಸ್ಥಿರರೂಪದ ಶಲಾಕೆ ಪ್ರೋಟೀನ್ ಅನ್ನು ಸಂಕೇತಿಸುವ ವ್ಯಕ್ತಿನಿರ್ದಿಷ್ಟ ಎಮ್.ಆರ್.ಎನ್.ಎ. (mRNA) ಆಧಾರಿತ ಲಸಿಕೆಯನ್ನು ನೀಡಲಾಗಿದೆ.

### ೧೧. ಭಯ ಮತ್ತು ಅನಿಶ್ಚಿತತೆಯ ಸಮಯದಲ್ಲಿ ಗುಣಾತ್ಮಕ ಮನೋಭಾವದ ಅವಶ್ಯಕತೆ

ಸಾವು ಹಾಗೂ ಆರ್ಥಿಕ ಬಿಕ್ಕಟ್ಟಿನ ಸುದ್ದಿಗಳು ನಮ್ಮನ್ನು ನಿರಂತರವಾಗಿ ಬಾಧಿಸುತ್ತಿರುವಾಗ ಗುಣಾತ್ಮಕ ಶಕ್ತಿಯನ್ನು ಉಳಿಸಿಕೊಳ್ಳುವುದು ಕಷ್ಟಸಾಧ್ಯ. ಹೀಗಿದ್ದರೂ, ಈ ಲಾಕ್‌ಡೌನ್ ನಮಗೆ ಪುನರಾಲೋಚನೆ ಮಾಡಲು, ಕುಟುಂಬದ ಸದಸ್ಯರೊಂದಿಗೆ ಗುಣಮಟ್ಟದ ಸಮಯ ಕಳೆಯಲು ಮತ್ತು ಕೊನೆಯಿಲ್ಲದ ನಿಯತಕ್ರಮ ಜೀವನದ ಜಂಜಾಟದಲ್ಲಿ ಈ ಹಿಂದೆ ಅನುಸರಿಸಲಾಗದಂತಹ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಲು ಒಂದು ಸುವರ್ಣಾವಕಾಶ. ಲಾಕ್‌ಡೌನ್ ಸಮಯದಲ್ಲಿ ದೂರದಲ್ಲಿರುವ ಕುಟುಂಬ ಸದಸ್ಯರು ಮತ್ತು ಸ್ನೇಹಿತರೊಂದಿಗೆ ಸಂಪರ್ಕದಲ್ಲಿರಲು ದೂರವಾಣಿ ಮತ್ತು ಸಾಮಾಜಿಕ ಮಾಧ್ಯಮಗಳು ವರವಾಗಿದ್ದರೂ ಕೂಡ ಇವು ವದಂತಿಗಳು ಹಾಗು ತಪ್ಪುಮಾಹಿತಿಗಳ ಮೂಲವೂ ಆಗಿರುವುದರಿಂದ ಸರಿಯಾದ ಮಾಹಿತಿ ಮತ್ತು



ಮಾರ್ಗಸೂಚಿಗಳಿಗಾಗಿ ನಾವು ಸರ್ಕಾರಿ ಸಂಸ್ಥೆಗಳನ್ನು ಮಾತ್ರ ಅವಲಂಬಿಸುವುದು ಸೂಕ್ತ.

### ೧೨. ಜಾತಿ, ಮತ, ಧರ್ಮಗಳ ಅಡೆತಡೆಗಳನ್ನು ಮೀರಿ ನಮ್ಮ ಮೂಲ ಅಸ್ತಿತ್ವಕ್ಕೆ ಒಗ್ಗಟ್ಟಿನ ಆವಶ್ಯಕತೆ

ನಮ್ಮ ದೇಶವನ್ನು ಮಾತ್ರವಲ್ಲದೆ ಇಡೀ ಪ್ರಪಂಚವನ್ನು ರಕ್ಷಿಸಲು ಭಾರತೀಯರಾದ ನಾವು ಜಾತಿ, ಮತ, ಧಾರ್ಮಿಕ ಪದ್ಧತಿ ಹಾಗೂ ಸಂಪ್ರದಾಯಗಳ ಎಲ್ಲೆಯನ್ನು ಮೀರಿ ಒಗಟ್ಟಿನಿಂದಿದ್ದೇವೆ ಎಂದು ಪ್ರದರ್ಶಿಸಬೇಕಾದ ಸಮಯವಿದು. ಎಲ್ಲರ ಯೋಗಕ್ಷೇಮಕ್ಕಾಗಿ ನಾವು ಉತ್ಕಟವಾಗಿ ಪ್ರಾರ್ಥಿಸೋಣ. ನಮ್ಮೆಲ್ಲರಲ್ಲೂ ಸುಪ್ತವಾಗಿರುವ ಉದಾತ್ತ ಮತ್ತು ಪ್ರಬಲ ಬದುಕುಳಿಯುವ ಪ್ರವೃತ್ತಿ (survival instinct) ಹಾಗೂ ಮಾತೃವಾತ್ಸಲ್ಯ ಪ್ರವೃತ್ತಿಯನ್ನು ನಾವು ಉದ್ದೀಪನಗೊಳಿಸೋಣ. ಭಾರತೀಯರಾಗಿ ನಾವು ರಚನಾತ್ಮಕವಾಗಿ ಮತ್ತು ಪ್ರೀತಿಯಿಂದ ಒಂದಾಗಿ ಕೆಲಸ ಮಾಡೋಣ. ಸರ್ವವ್ಯಾಪಿ ರೋಗವಾದ ಕೋವಿಡ್-೧೯ ಅನ್ನು ದೂರವಿರಿಸಲು ಏಕತೆ, ಸೌಹಾರ್ದತೆ ಮತ್ತು ಪರಸ್ಪರ ಪ್ರೀತಿಯ ಭಾವನೆ ಈ ಸಂದರ್ಭದಲ್ಲಿ ಅತ್ಯಾವಶ್ಯಕ. **ಇದು ನಮ್ಮ ಧರ್ಮ, ಜೀವನ ಮಿಡಿತ, ಮನಸ್ಸಿನ ಚಿಂತನಾಲಹರಿ ಹಾಗೂ ಕಾರ್ಯವೈಖರಿಯಾಗಿರಬೇಕು.** ಈ ಮಾರಕ ಕೊರೊನಾ ವೈರಸ್‌ನಿಂದ ವಿಮೋಚನೆಗಾಗಿ, ನಾವೆಲ್ಲರೂ ಒಟ್ಟಾಗಿ ಪ್ರಾರ್ಥಿಸೋಣ ಮತ್ತು ಮನೆಯಲ್ಲಿಯೇ ಕುಟುಂಬದೊಂದಿಗೆ ಮತ್ತು ಮನೆಯಲ್ಲಿಯೇ ಯೋಗಕ್ಷೇಮದಿಂದ ಇರಲು ಪ್ರತಿಜ್ಞೆ ಮಾಡೋಣ.

ಪ್ರಸಿದ್ಧ ಫ್ರೆಂಚ್ ಶಸ್ತ್ರಚಿಕಿತ್ಸಕ ಮತ್ತು ಜೀವಶಾಸ್ತ್ರಜ್ಞ ಹಾಗೂ ೧೯೧೨ರಲ್ಲಿ ಶರೀರಕ್ರಿಯಾವಿಜ್ಞಾನ ಅಥವಾ ವೈದ್ಯಕೀಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದ ಡಾ. ಅಲೆಕ್ಸಿಸ್ ಕ್ಯಾರೆಲ್ ಹೀಗೆ ಹೇಳುತ್ತಾರೆ, ''ಒಬ್ಬ ವ್ಯಕ್ತಿಯು ಉತ್ಪಾದಿಸಬಲ್ಲ ಅತಿ ಪ್ರಬಲ ರೂಪದ ಶಕ್ತಿಯೆಂದರೆ ಅದು ಪ್ರಾರ್ಥನೆ. ಪ್ರಶಾಂತ ಪ್ರಾರ್ಥನಾ ಪ್ರಯತ್ನದಿಂದ ರೋಗಿಗಳು ವಿಷಣ್ಣತೆ ಮತ್ತು ರೋಗಗಳಿಂದ ಹೊರಬರುವುದನ್ನು ಒಬ್ಬ ವೈದ್ಯನಾಗಿ ನಾನು ನೋಡಿದ್ದೇನೆ.''

ಈ ಬ್ರಹ್ಮಾಂಡವನ್ನು ಸೃಷ್ಟಿಸಿ, ಅದರ ಭಾರವನ್ನು ಇನ್ನೂ ಧರಿಸಿರುವ ಸರ್ವಶಕ್ತ, ಸರ್ವಜ್ಞ ಹಾಗೂ ಆಧ್ಯಾತ್ಮಿಕ ಜಾಗೃತ ಶಕ್ತಿಗೆ ನಮ್ಮ ಒಗಟ್ಟಿನ ಮತ್ತು ಪ್ರಾಮಾಣಿಕ ಪ್ರಾರ್ಥನೆಯ ಕೂಗು ಕೇಳಲಿ. ಹಿಂದೆಂದೂ ಕಂಡಿಲ್ಲದ ಇಂತಹ ವಿಷಮ ಪರಿಸ್ಥಿತಿಯಲ್ಲಿ ನಮ್ಮ ದೇಶಪ್ರೇಮ, ವಿಶ್ವಭ್ರಾತೃತ್ವ ಮತ್ತು ಐಕ್ಯತೆಯು ಅವುಗಳ ನಿಜವಾದ ಅಭಿವ್ಯಕ್ತಿಯನ್ನು ಪಡೆಯಲಿ. ಪಾಶ್ಚಿಮಾತ್ಯರ ವೈಜ್ಞಾನಿಕ ಸಾಮರ್ಥ್ಯ ಹಾಗೂ ಪೂರ್ವದೇಶಗಳ ಆಧ್ಯಾತ್ಮಿಕ ಸಾಮರ್ಥ್ಯಗಳು ಒಂದುಗೂಡಲಿ ಮತ್ತು ಈ ಭಯಾನಕ ಸರ್ವವ್ಯಾಪಿ ರೋಗದೊಂದಿಗೆ ಹೋರಾಡಲು ಹಾಗೂ ಶತ್ರುವನ್ನು ಹೊಡೆದೋಡಿಸಲು ಪರಸ್ಪರ ಕೆಲಸಮಾಡುವಂತಾಗಲಿ. ಎಲ್ಲಾ ರಾಜಕೀಯ ಮತ್ತು ಧಾರ್ಮಿಕ ಮುಖಂಡರು, ಸರ್ಕಾರಿ ನೌಕರರು, ಪೋಲೀಸ್ ಪಡೆ, ವೈದ್ಯಕೀಯ, ಔಷಧೀಯ ಮತ್ತು ಶುಶ್ರೂಷಾ ದಳಗಳು ಹಾಗೂ ವ್ಯಾಪಾರಿಗಳ ಸಮುದಾಯವು ವೈಜ್ಞಾನಿಕವಾದ ಕ್ರಿಯಾಯೋಜನೆಗೆ ಅನುಗುಣವಾಗಿ ನಿರ್ವಂಚನೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದರೆ ನಾವು ಕೊರೊನಾ ವೈರಸ್ ಸರ್ವವ್ಯಾಪಿ ರೋಗವನ್ನು ಜಯಿಸುವುದು ಮಾತ್ರವಲ್ಲದೆ ತಿಳಿವಳಿಕೆಯುಳ್ಳ, ಸ್ನೇಹ ಮನೋಭಾವದ ಮತ್ತು ಪ್ರೀತಿಯಿಂದ ಕೂಡಿದ ಒಂದು ಹೊಸ, ಪರಿಸರಸ್ನೇಹಿ, ಸ್ವಚ್ಛ ಮತ್ತು ಆಧ್ಯಾತ್ಮಿಕವಾಗಿ ಸ್ಪಂದಿಸುವ ವಿಶ್ವವನ್ನು ನಿರ್ಮಾಣ ಮಾಡಲು ಸಾಧ್ಯ.

